## ‘ರಾಮ್‌ಲೀಲಾ’ದಲ್ಲಿ ಧಕ್ ಧಕ್!



‘ಧಕ್ ಧಕ್ ಹುಡುಗಿ’ಯ ಮೇಲೆ ಬಾಲಿವುಡ್‌ಗೀಗ ಅಪಾರ ಒಲವು. ಕತ್ರೀನಾ, ಕರೀನಾರಂತಹ ನಾಯಕಿಯರು ಐಟಂ ಹಾಡುಗಳಿಗೆ ಸೊಂಟ ಕುಣಿಸಲು ತುದಿಗಾಲಲ್ಲಿ ತಯಾರಾಗಿ ನಿಂತಿದ್ದರೆ, ಅತ್ತ ಬಿ ಟೌನ್‌ನ ಖ್ಯಾತನಾಮ ನಿರ್ದೇಶಕರು ಯುವತಿಯರನ್ನೂ ನಾಚಿಸುವಂತೆ ಈಗಲೂ ಚಾರ್ಮ್ ಹೊಂದಿರುವ ಮಾಧುರಿ ದೀಕ್ಷಿತ್ ಮನೆ ಬಾಗಿಲು ತಟ್ಟುತ್ತಿದ್ದಾರೆ. ‘ಯೇ ಜವಾನಿ ಹೇ ದೀವಾನಿ’ ಚಿತ್ರದಲ್ಲಿ ‘ಘಾಗ್ರಾ’ ಹಾಡಿಗೆ ರಣಬೀರ್ ಕಪೂರ್ ಜೊತೆ ಹೆಜ್ಜೆ ಹಾಕಿದ್ದ ಮಾಧುರಿಗೆ ಈಗ ವಿಶೇಷ ಪಾತ್ರ ಮತ್ತು ಐಟಂ ಗೀತೆಗಳಲ್ಲಿ ಕಾಣಿಸಿಕೊಳ್ಳುವಂತೆ ಬೇಡಿಕೆ ಹೆಚ್ಚುತ್ತಿದೆಯಂತೆ. ಮಾಧುರಿಯ ಕಾಲ್‌ಷೀಟ್‌ಗಾಗಿ ಕಾದಿರುವ ಖ್ಯಾತರ ಸಾಲಿಗೆ ಸಂಜಯ್ ಲೀಲಾ ಬನ್ಸಾಲಿ ಕೂಡಾ ಸೇರಿಕೊಂಡಿದ್ದಾರೆ. ಷೇಕ್ಸ್‌ಪಿಯರ್‌ನ ರೋಮಿಯೊ–ಜೂಲಿಯೆಟ್ ನಾಟಕವನ್ನಾಧರಿಸಿದ ‘ರಾಮ್‌ಲೀಲಾ’ ಚಿತ್ರದಲ್ಲಿ ಹೆಜ್ಜೆ ಹಾಕುವಂತೆ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ಮಾಧುರಿಯನ್ನು ಸಂಪರ್ಕಿಸಿದ್ದಾರಂತೆ. ರಣವೀರ್ ಸಿಂಗ್ ಮತ್ತು ದೀಪಿಕಾ ಪಡುಕೋಣೆ ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಚಿತ್ರ ಬಾಲಿವುಡ್‌ನಲ್ಲಿ ಹೊಸ ಮೈಲುಗಲ್ಲಾಗಲಿದೆ ಎನ್ನಲಾಗುತ್ತಿದೆ. ರಣಬೀರ್ ಜೊತೆ ಮಾಧುರಿ ಹೆಜ್ಜೆ ಹಾಕಿದ ‘ಯೇ ಜವಾನಿ ಹೇ ದೀವಾನಿ’ಯ ಗಳಿಕೆ ನೂರೈವತ್ತು ಕೋಟಿ ದಾಟಿ ಮುನ್ನುಗ್ಗುತ್ತಲೇ ಇದೆ. ಮಾಧುರಿಯ ಹೆಜ್ಜೆ ರಣವೀರ್‌ಗೂ ಇದೇ ರೀತಿ ಅದೃಷ್ಟ ತಂದುಕೊಡುತ್ತದೆಯೋ ನೋಡಬೇಕು.

## ಸಲ್ಲೂ ಕಾನೂನು ಸೈಟ್!




ವಿವಾದಕ್ಕೆ ಮತ್ತೊಂದು ಹೆಸರು ಸಲ್ಲೂ ಮಿಯಾ. ಅತ್ತ ಭರ್ಜರಿ ಹಿಟ್‌ಗಳನ್ನು ನೀಡುತ್ತಲೇ ಇರುವ ಸಲ್ಮಾನ್ ಒಂದಿಲ್ಲೊಂದು ಕಾರಣಕ್ಕೆ ಸದಾ ಸುದ್ದಿಯಲ್ಲಿರುತ್ತಾರೆ. ಅದರಲ್ಲೂ ಕಾನೂನು ಸಮಸ್ಯೆಗೆ ಸಲ್ಲು ಸಿಕ್ಕಿಬೀಳುವುದು ತೀರಾ ಸಾಮಾನ್ಯ. ಮಾಧ್ಯಮಗಳು ಮತ್ತು ಅಭಿಮಾನಿಗಳಿಗೆ ಉತ್ತರ ನೀಡಬೇಕಾದ ಅನಿವಾರ್ಯತೆಯಲ್ಲಿ ಸಿಲುಕುತ್ತಿದ್ದ ಸಲ್ಲೂ ಮಿಯಾ ಅದಕ್ಕೊಂದು ಪರಿಹಾರ ಕಂಡುಕೊಂಡಿದ್ದಾರೆ. ಬಾಲಿವುಡ್‌ನಲ್ಲಿ ಇದೊಂದು ರೀತಿ ವಿಭಿನ್ನ ಹೆಜ್ಜೆ. ಎಲ್ಲರೂ ತಮ್ಮ ಅನಿಸಿಕೆ ಹಂಚಿಕೊಳ್ಳಲು, ಪ್ರತಿಭೆ ಪ್ರದರ್ಶಿಸಲು ವೆಬ್‌ಸೈಟ್ ಆರಂಭಿಸಿದರೆ, ಸಲ್ಮಾನ್ ತನ್ನ ಮೇಲಿನ ಖಟ್ಲೆ, ವಿವಾದಗಳ ಕುರಿತ ಸಮಗ್ರ ಮಾಹಿತಿಯನ್ನು ನೀಡಲೆಂದೇ ವೆಬ್‌ಸೈಟ್ ಹುಟ್ಟುಹಾಕಿದ್ದಾರೆ. ಇಂತಹದೊಂದು ಪ್ರಯತ್ನಕ್ಕೆ ಸಲ್ಲು ಕೈಹಾಕಲು ಕಾರಣ, ಅವರ ಮೇಲಿನ ಪ್ರಕರಣಗಳ ಕುರಿತ ವದಂತಿ, ಸುಳ್ಳು ಸುದ್ದಿಗಳು. ತಮ್ಮ ಮೇಲಿರುವ ಕಾನೂನು ಪ್ರಕರಣಗಳು ಯಾವುವು, ಅವುಗಳ ವಿಚಾರಣೆ ಯಾವ ಹಂತದಲ್ಲಿದೆ ಇತ್ಯಾದಿ ಮಾಹಿತಿಗಳನ್ನು ನೀಡುವುದಕ್ಕಾಗಿ ಸಲ್ಲುಭಾಯ್ www.salmankhanfiles.com ಎಂಬ ವೆಬ್‌ಸೈಟ್ ಪ್ರಾರಂಭಿಸಿದ್ದಾರೆ.

‘ಕೋರ್ಟ್‌ನಲ್ಲಿರುವ ಪ್ರಕರಣಗಳ ಬಗ್ಗೆ ವಾಸ್ತವ ಮಾಹಿತಿಗಳನ್ನು ತಿಳಿಸುವ ಸುಲಭ ಮಾರ್ಗವಾಗಿ ಈ ವೆಬ್‌ಸೈಟ್ ಅನ್ನು ಪ್ರಾರಂಭಿಸಿದ್ದೇನೆ. ಇದರಲ್ಲಿ ನನ್ನ ವಕೀಲರು ಕಾಲಕಾಲಕ್ಕೆ ಮಾಹಿತಿಗಳನ್ನು ದಾಖಲಿಸಲಿದ್ದಾರೆ...’ ಇತ್ಯಾದಿ ವಿವರಗಳನ್ನು ನೀಡಿದ್ದಾರೆ ಸಲ್ಲು.

## ಚೂಸಿ ಕ್ಯಾಟ್



ಒಂದು ಕಾಲವಿತ್ತು. ಭಾಷೆ ಬಾರದ ಕತ್ರೀನಾ ಬಾಲಿವುಡ್‌ಗೆ ಕಾಲಿಟ್ಟ ದಿನಗಳವು. ಅವಕಾಶಗಳಿಗಾಗಿ ಅಲೆದರೂ ಸಿಗುತ್ತಿದ್ದದ್ದು ನಿರಾಶೆ. ಸಿಕ್ಕ ಸಣ್ಣಪುಟ್ಟ ಪಾತ್ರಗಳನ್ನೆಲ್ಲಾ ಅಭಿನಯಿಸಬೇಕಾದ ಅನಿವಾರ್ಯತೆ. ಆದರೆ ದಶಕದ ಹೆಣಗಾಟ ಈಗಿಲ್ಲ. ಕ್ಯಾಟ್ ಈಗ ನಿರ್ಮಾಪಕರ ನಟಿ. ಬೇಡಿಕೆ ಮೇಲೇರಿದಂತೆ ಸಂಭಾವನೆಯ ಮೊತ್ತವನ್ನೂ ಆಗಸದೆತ್ತರಕ್ಕೆ ಏರಿಸಿಕೊಂಡಿರುವ ಆಕೆ, ತಾನೀಗ ಬೆಲೆಬಾಳುವ ಆಭರಣ ಎಂಬುದನ್ನು ಸಾಬೀತುಪಡಿಸಿಕೊಂಡಿದ್ದಾರೆ. ಹೀಗಾಗಿ ಕಂಡ ಕಂಡ ಚಿತ್ರಗಳನ್ನೆಲ್ಲಾ ಅವರು ಒಪ್ಪಿಕೊಳ್ಳುತ್ತಿಲ್ಲ. ಕಂಡ ಕಂಡ ಚಿತ್ರಗಳೆಂದರೆ ಸಣ್ಣಪುಟ್ಟ ಚಿತ್ರಗಳಲ್ಲ. ಅವರು ತಿರಸ್ಕರಿಸಿದ್ದ ಚಿತ್ರಗಳ ಹೆಸರುಗಳನ್ನು ನೋಡಿದರೆ ಕತ್ರೀನಾ ಹೀಗಾಗಿದ್ದಾರೆಯೇ ಎಂದು ಅಚ್ಚರಿ ಮೂಡುತ್ತದೆ.

ನಿಜ. ಕತ್ರೀನಾ ನಟಿಸಲು ಒಲ್ಲೆ ಎಂದ ಚಿತ್ರಗಳು ಶಾರೂಖ್ ಅಭಿನಯದ ‘ಚೆನ್ನೈ ಎಕ್ಸ್‌ಪ್ರೆಸ್’, ರಣಬೀರ್ ಕಪೂರ್ ನಾಯಕರಾಗಿರುವ ‘ಯೇ ಜವಾನಿ ಹೇ ದೀವಾನಿ’ ಮತ್ತು ರಣವೀರ್ ಸಿಂಗ್ ನಟಿಸಿರುವ ‘ರಾಮ್‌ಲೀಲಾ’. ಎಲ್ಲವೂ ಹೆಸರಾಂತ ನಿರ್ದೇಶಕರ ಚಿತ್ರಗಳು. ಕತ್ರೀನಾ ನಟಿಸಿರುವ ಹಲವು ಚಿತ್ರಗಳು ಬಾಕ್ಸ್ ಆಫೀಸ್ ಕೊಳ್ಳೆ ಹೊಡೆದು ನೂರು ಕೋಟಿ ಕ್ಲಬ್ ಸೇರಿವೆ. ಕತ್ರೀನಾ ಸಂಭಾವನೆ ಹೆಚ್ಚಿಸಿಕೊಂಡಿದ್ದಾರೆ. ಬಾಲಿವುಡ್‌ನಲ್ಲಿ ಅತಿ ಹೆಚ್ಚು ಸಂಭಾವನೆ ಪಡೆಯುವ ಕೆಲವೇ ನಟಿಯರಲ್ಲಿ ಕ್ಯಾಟ್ ಕೂಡ ಒಬ್ಬರು. ವಿಶೇಷವೆಂದರೆ ಕತ್ರೀನಾ ತಿರಸ್ಕರಿಸಿದ ಈ ಮೂರೂ ಪ್ರಮುಖ ಚಿತ್ರಗಳಲ್ಲಿ ಆ ಸ್ಥಾನವನ್ನು ಅಲಂಕರಿಸಿರುವುದು ದೀಪಿಕಾ ಪಡುಕೋಣೆ. ಒಂದರ ಹಿಂದೊಂದು ಚಿತ್ರಗಳನ್ನು ಒಲ್ಲೆ ಎನ್ನುತ್ತಿರುವ ಕತ್ರೀನಾ ಸ್ವಂತ ಸಿನಿಮಾ ಪ್ರೊಡಕ್ಷನ್‌ಗೆ ಇಳಿಯುವ ಚಿಂತನೆಯಲ್ಲಿದ್ದಾರಂತೆ.

■ ಅಮಿ

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65